ಸದಮಲ ಭಕುತಿಯಲಿ ದೇಶಸ್ಥಿತಿಯನೆ ತಿಳಿದು
ಪದುಮಾಸನವ ಹಾಕಿ ಪರಮ ವಿಶ್ವಾಸದಲಿ

ಅಂಗವನು ಚಲಿಸದೆ ಚೆನ್ನಾಗಿ ದೃಢವಾಗಿ
ಕಂಗಳನೆ ಮುಚ್ಚಿ ಇಂದ್ರಿಯಗಳನೆ ತೆರೆದು
ಮಂಗಳ ಶೋಭಿತ ಅಖಂಡ ಧ್ಯಾನದಿಂ
ತರಂಗದೊಳಗೆ ನಿಲಿಸಿ ಎಲ್ಲವನು ಕಾಣೋ

ಭಗವದ್ರೂಪಗಳೆಲ್ಲ ಒಂದು ಬಾರಿ ಸ್ಮರಿಸಿ
ಮಗುಳೆ ಪರಮ ಗುರುವಿನ ಮೂರ್ತಿಗೆ
ತೆಗೆದು ಆಹ್ವಾನ ಮಾಡಿ ಅಲ್ಲಿಂದ ಹರುಷದಿ
ಸ್ವಗುರು ಬಿಂಬಮೂರ್ತಿಯಲ್ಲಿ ಐಕ್ಯವನು ಮಾಡು

### ಅಪರೋಕ್ಷಾನುಭೂತಿ

ಈ ಬಗೆಯ ಜ್ಞಾನ ಪ್ರೇಮ ಧ್ಯಾನಗಳು ಮಿಳಿತಗೊಂಡ ಉಪಾಸನೆಗೆ ಭಗವಂತನು ಸುಪ್ರೀತನಾದರೆ, ಅಂತಹ ಸಾಧಕನಿಗೆ ಬಿಂಬಸಾಕ್ಷಾತ್ಕಾರವಾಗುವುದು. ಇದರಿಂದ ಜೀವಿಗೆ ತನ್ನ ಸ್ವರೂಪ ದರ್ಶನವಾಗುವುದರ ಜೊತೆಗೆ, ಹೃದಯಕಮಲದಲ್ಲಿ ಬಿಂಬಮೂರ್ತಿಯಾದ ಹರಿಯ ದರ್ಶನವೂ ಆಗುವುದು. ಶ್ರೀಮಧ್ವಾಚಾರ್ಯರು ತಮ್ಮ **ಮಹಾಭಾರತ ತಾತ್ಪರ್ಯ ನಿರ್ಣಯ** ದಲ್ಲಿ ಈ ಬಗೆಯ ಅಪರೋಕ್ಷಾನುಭೂತಿಯ ಅನುಭವವನ್ನು ಹೀಗೆ ಬಣ್ಣಿಸುತ್ತಾರೆ:

**ಯದಾ ಮುಕ್ತಿ ಪ್ರದಾನಾಯ ಸ್ವಯೋಗ್ಯಂ ಪಶ್ಯತಿ ಧ್ರುವಂ ॥**
**ರೂಪಂ ಹರೇಸ್ತದಾ ತಸ್ಯ ಸರ್ವಪಾಪಾನಿ ಭಸ್ಮಸಾತ್ ।**
**ಯಾಂತಿ ಪೂರ್ವಾಣಿ ಉತ್ತರಾಣಿ ನ ಶ್ಲೇಷಂ**
**ಯಾಂತಿ ಕಾನಿಚಿತ್ ॥**
**ಮೋಕ್ಷಶ್ಚ ನಿಯತಃ ತಸ್ಮಾತ್ ಸ್ವಯೋಗ್ಯಹರಿದರ್ಶನೇ।**

(೧: ೧೩೦, ೧೩೧, ೧೩೨)

"ಮುಕ್ತಿಯ ಸಮಯದಲ್ಲಿ ಒಬ್ಬನು ತನ್ನ ಯೋಗ್ಯತೆಗೆ ಅನುಸಾರವಾಗಿ ಹರಿಯ ಸ್ವರೂಪವನ್ನು ಸ್ಥಿರವಾಗಿ ನೋಡುತ್ತಾನೆ. ಆಗ ಅವನು ಹಿಂದೆ ಮಾಡಿದ ಪಾಪಗಳೆಲ್ಲವೂ ಭಸ್ಮೀಭೂತವಾಗುತ್ತವೆ. ಹಾಗೂ ಭವಿಷ್ಯದ ಪಾಪಗಳು ಅವನನ್ನು ಅಂಟಿಕೊಳ್ಳುವುದಿಲ್ಲ. ಹೀಗಾಗಿ ತನ್ನ ಯೋಗ್ಯತೆಗೆ ತಕ್ಕಂತೆ ಹರಿಯ ದರ್ಶನವಾದಾಗ, ಮೋಕ್ಷವು ನಿಶ್ಚಿತ."

ಮಹಾನ್ ಅನುಭಾವಿಗಳಾದ ಹರಿದಾಸರು ಅಂತಹ ಸಾಕ್ಷಾತ್ಕಾರವನ್ನು ಮಾಡಿಕೊಂಡವರು. ಅದರ ಪರಮಾನುಭವವನ್ನು ತಮ್ಮ ಪದ್ಯಗಳಲ್ಲಿ ಅವರು ಹೀಗೆ ವರ್ಣಿಸುತ್ತಾರೆ:

ಅಂತರಂಗದ ಕದವು ತೆರೆಯಿತಿಂದು
ಎಂತು ಪುಣ್ಯದ ಫಲದ ಪ್ರಾಪ್ತಿ ದೊರಕಿತೊ ಎನಗೆ

ಹರಿಕರುಣವೆಂಬಂಥ ಕೀಲಿಕೈ ದೊರಕಿತು
ಗುರುಕರುಣೆಯೆಂಬಂಥ ಶಕ್ತಿಯಿಂದ
ಪರಮಭಾಗವತರ ಸಹವಾಸದಲಿ ಪೋಗಿ
ಹರಿಸ್ಮರಣೆಯಿದ್ದಲ್ಲಿ ಬೀಗಮುದ್ರೆಯ ತೆಗೆದೆ

ಸುತ್ತಲಿದ್ದವರೆಲ್ಲ ಪಲಾಯನವಾದರು
ಭಕ್ತಿಕಕ್ಕಡವೆಂಬ ಜ್ಞಾನದೀಪ
ಜಿತ್ತಾಗಿ ಹಿಡಕೊಂಡು ದ್ವಾರದೊಳಗೆ ಪೊಕ್ಕೆ
ಎತ್ತ ನೋಡಿದರತ್ತ ಶೃಂಗಾರಸದನ (ವಿಜಯದಾಸರು)

ಈ ಬಗೆಯ ಮುಕ್ತಿಯಲ್ಲಿ ನೈಜಸುಖಾನುಭವವಾಗುತ್ತದೆ. ದುಃಖಗಳಿಗೆ ಕಾರಣವಾದ ಲಿಂಗದೇಹವು ಭಂಗವಾಗಿ ಭಗವಂತನಾದ ವಾಸುದೇವನ ದರ್ಶನದಿಂದ ಸಾಧಕನು ಪೂರ್ಣ ಆನಂದವನ್ನು ಹೊಂದುವನು. ತನ್ನ ಸ್ವರೂಪದ ನಿಜವಾದ ಅರಿವನ್ನು ಮಾಡಿಕೊಂಡ ಅವನು ಆ ಸ್ವರೂಪಭೂತವಾದ ಅಪ್ರಾಕೃತ ಆನಂದವನ್ನು ಅನುಭವಿಸುವನು.

ಇಂಥ ಮುಕ್ತಿಗೆ ನಿರ್ಮಲವಾದ ಭಕ್ತಿಯೇ ಆಧಾರ. **"ಭಕ್ತಿರಸದಲ್ಲಿ ಎನ್ನ ಚಿತ್ತ ಪರವಶನಾಗಿ ಅಚ್ಯುತನ್ನ ನಾಮವ ಬಚ್ಚಿಟ್ಟುಕೊಂಡವಗಲ್ಲದೆ"** ಶ್ರೀರಾಮನ ದಿವ್ಯನಾಮ ದೊರಕುವುದಿಲ್ಲ ಎಂದು ಪುರಂದರದಾಸರು ಹೇಳುತ್ತಾರೆ. ಶ್ರೀಪಾದರಾಜರೂ ಕೂಡ **"ಭಕ್ತಿ ಬೇಕು ವಿರಕ್ತಿ ಬೇಕು, ಶಕ್ತಿ ಬೇಕು ಮುಂದೆ ಮುಕ್ತಿಯ ಬಯಸುವವಗೆ"** ಎಂಬ ಮಾತುಗಳ ಮೂಲಕ ಮುಕ್ತಿಗೆ ಬೇಕಾದ ಆವಶ್ಯಕತೆಗಳನ್ನು ಎತ್ತಿಹೇಳುತ್ತಾರೆ.

### ಉಪಸಂಹಾರ

ಹೀಗೆ ಸಮಾಜದ ಎಲ್ಲ ವರ್ಗದವರಿಗೆ ಭಕ್ತಿಸುಧೆಯನ್ನು ಹರಿಸಿ ಪುನೀತಗೊಳಿಸಿದ ಮಹಾತ್ಮರು ಹರಿದಾಸರು. ಬರಿಯ ಭಾವುಕತೆಯನ್ನು ಮೀರಿ, ಜ್ಞಾನಸೋಪಾನದ ಮೂಲಕ, ಯೋಗವೆಂಬ ದುಸ್ಸಾಧ್ಯವಾದ ಪರ್ವತಶ್ರೇಣಿಯನ್ನು ಏರಿ, ಭಕ್ತಿಯ ಬೆಳಕಿನಲ್ಲಿ ಮುಕ್ತಿಸಾಮ್ರಾಜ್ಯವನ್ನು ಮುಟ್ಟಿದ ಮಹಾತ್ಮರು ಅವರು. ಅವರ ಹಾಡುಗಳಲ್ಲಿ ಕೇವಲ ಬರಡು ನಂಬಿಕೆ ಇಲ್ಲ. ಅದಕ್ಕೆ ಬದಲಾಗಿ, ನಂಬಿಕೆಯನ್ನು ಮೀರಿದ ಸಾಧನೆ ಮತ್ತು ತತ್ತ್ವಜಿಜ್ಞಾಸೆಗಳು ಅವುಗಳಲ್ಲಿ ವ್ಯಕ್ತವಾಗಿವೆ. ಅವೇ ಅನುಭಾವವಾಗಿ ಆಧ್ಯಾತ್ಮಿಕ ಶಿಖರವನ್ನು ತಲುಪಿವೆ. ಮಾಧ್ವತತ್ತ್ವವು ದಾಸರ ಪದ್ಯಗಳಲ್ಲಿ ಸಾಧನಾಗಾಥೆಯಾಗಿ ಹೊರ ಹೊಮ್ಮಿದೆ; ಸಾಕ್ಷಾತ್ಕಾರದ ಚಿತ್ರಣವಾಗಿ ಮೈದುಂಬಿದೆ. ಇದು ಕನ್ನಡ ನಾಡಿನಲ್ಲಿ, ಕನ್ನಡ ನುಡಿಯ ಮೂಲಕ, ಕರುನಾಡವರ ಆಧ್ಯಾತ್ಮಿಕ ಸಂಪತ್ತಾಗಿ ಉಳಿದು ಬೆಳೆದು, ಇಂದಿಗೂ ಚಿರಂತನ ಪ್ರೇರಣೆಯನ್ನು ನೀಡುತ್ತಿರುವುದು ಈ ನಾಡಿನ ಮಕ್ಕಳಾದ ನಮ್ಮ ಸೌಭಾಗ್ಯವೇ ಸರಿ.

### ಆಧಾರ:


೧. ಕರ್ನಾಟಕದ ಹರಿದಾಸರು, *ಡಾ. ಹೆಚ್.ಕೆ. ವೇದವ್ಯಾಸಾಚಾರ್*
೨. ಕರ್ನಾಟಕದ ಹರಿದಾಸ ಸಾಹಿತ್ಯ, *ಶ್ರೀ ಆರ್. ಎಸ್. ಪಂಚಮುಖಿ*




**ರಾಮಕೃಷ್ಣ–ವಿವೇಕಾನಂದ ಭಾವಧಾರೆಯು ಜಗತ್ತಿನ ಧರ್ಮಗಳ ನಡುವೆ ಸಾಮರಸ್ಯವನ್ನು ಮೂಡಿಸುವ ಸೇತುವೆಯಾಗಬಲ್ಲದು. ವಿವಿಧ ಧರ್ಮಗಳ ಮಧ್ಯೆ ಸಂವಾದಕ್ಕೆ ಇದು ಸಹಾಯಕವಾಗುತ್ತದೆ. ಇದನ್ನು ಸರಳವಾದ ಹಾಗೂ ಪ್ರಬುದ್ಧವಾದ ವಿಚಾರಮಂಡನೆಯ ಮೂಲಕ ನಮಗೆ ತಿಳಿಸಿಕೊಟ್ಟಿರುವ ಪೂಜ್ಯ ಸ್ವಾಮಿ ಸ್ಮರಣಾನಂದಜಿ ಮಹಾರಾಜ್ ಅವರು ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರು. ಇವರು ಟರ್ಕಿ ದೇಶದ ಸಿವಾಸ್ ನಗರದ ಕಮ್‌ಹುರಿಯೆತ್ ವಿಶ್ವವಿದ್ಯಾನಿಲಯದಲ್ಲಿ ಜರುಗಿದ 'ಶಾಂತಿಗಾಗಿ ಸಂವಾದ–ಒಗ್ಗೂಡಿ ಬಾಳುವುದಕ್ಕೆ ಧರ್ಮಗಳ ಕೊಡುಗೆ' ಈ ವಿಷಯದ ಮೇಲಿನ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ೧೨.೯.೨೦೦೨ ರಂದು ಮಾಡಿದ ಭಾಷಣವನ್ನು ಅನುವಾದಿಸಿದವರು ಮೈಸೂರು ಶ್ರೀರಾಮಕೃಷ್ಣ ಆಶ್ರಮದ ಪುಸ್ತಕ ಪ್ರಕಟಣ ವಿಭಾಗದಲ್ಲಿ ಸೇವೆ ಸಲ್ಲಿಸುತ್ತಿರುವ ಸ್ವಾಮಿ ಜ್ಞಾನಯೋಗಾನಂದಜಿ ಅವರು.**

ಪ್ರಿಯ ಸಹೋದರ ಸಹೋದರಿಯರೆ,

ಇಲ್ಲಿಗೆ ನಾನು ಬಂದು ವಿವಿಧ ಧರ್ಮಗಳ ಪ್ರತಿನಿಧಿಗಳನ್ನು ಭೇಟಿಯಾಗಿ, ಇಲ್ಲಿ ನಡೆಯುವ **'ಶಾಂತಿಗಾಗಿ ಸಂವಾದ'** ಕಾರ್ಯಕ್ರಮದಲ್ಲಿ ನನ್ನ ಆಲೋಚನೆಗಳನ್ನು ಹಂಚಿಕೊಳ್ಳಲು ಸಾಧ್ಯವಾದುದಕ್ಕೆ ಸಂತಸಪಡುತ್ತೇನೆ.

ನಾನು ಭಾರತದೇಶದ ಸಂನ್ಯಾಸಿ ಸಂಘವೊಂದಕ್ಕೆ ಸೇರಿದವನು. ಈ ಸಂಘ ಕೇವಲ ನೂರು ವರ್ಷಗಳ ಹಿಂದೆಯಷ್ಟೆ ಸ್ಥಾಪಿತವಾಗಿದ್ದರೂ, ಇದು ನಮ್ಮ ಪುರಾತನ ಧಾರ್ಮಿಕ ಪರಂಪರೆಯ ಒಂದು ಅಂಗವಾಗಿದೆ. ಶ್ರೀರಾಮಕೃಷ್ಣರು (೧೮೩೬–೧೮೮೬) ಈ ಪರಂಪರೆಯ ತತ್ತ್ವಗಳನ್ನು ಅನುಷ್ಠಾನ ಮಾಡಿದರು; ಬೋಧಿಸಿದರು. ಚರ್ಚೆಯ ವಿಷಯಕ್ಕೆ ಹೋಗುವ ಮೊದಲು ಅವರ ಬಗ್ಗೆ ಕೆಲವು ಮಾತುಗಳನ್ನು ಹೇಳಲು ಇಚ್ಛಿಸುತ್ತೇನೆ. ಏಕೆಂದರೆ, ಅವರು ಆಧುನಿಕ ಯುಗಕ್ಕೆ ಶಾಂತಿ ಸಮನ್ವಯಗಳ ಸಂದೇಶವನ್ನು ನೀಡಿದರು.

ಶ್ರೀರಾಮಕೃಷ್ಣರು ೧೮೩೬ ರಲ್ಲಿ ಪಶ್ಚಿಮ ಬಂಗಾಳದ ಕುಗ್ರಾಮವೊಂದರಲ್ಲಿ ಬಡದಂಪತಿಗಳ ಮಗುವಾಗಿ ಜನ್ಮವೆತ್ತಿದರು. ಎಳೆಯ ಪ್ರಾಯದಲ್ಲೇ ಅವರು ಭಗವಂತನ ಸಾಕ್ಷಾತ್ಕಾರಕ್ಕಾಗಿ ತಮ್ಮನ್ನು ತಾವೇ ಸಮರ್ಪಿಸಿಕೊಂಡರು. ಹನ್ನೆರಡು ವರ್ಷಗಳ ದೀರ್ಘ ಕಾಲ, ನಮಗೆ ಇದುವರೆಗೆ ತಿಳಿದಿರುವ ಎಲ್ಲ ಧರ್ಮಗಳ ಮಾರ್ಗಗಳಲ್ಲಿಯೂ, ಅವರು ಸಾಧನೆ ಮಾಡಿದರು. ಪ್ರತಿಯೊಂದು ಮಾರ್ಗದಲ್ಲೂ ಸತ್ಯವನ್ನು ಕಂಡುಕೊಂಡ ಅವರು, ಎಲ್ಲ ಪಥಗಳೂ ಒಂದೇ ಗುರಿಯತ್ತ ನಮ್ಮನ್ನು ಒಯ್ಯುವುವು ಎಂದು ಸಾರಿದರು. ಅವರು ಯಾವ ಗ್ರಂಥವನ್ನೂ ಓದಲಿಲ್ಲ. ಅವರ ಪ್ರಯಾಣ ಅಜ್ಞಾತದ ಕಡೆಗೆ. ಅವರ ಸಂಶೋಧನೆಗಳು ಅವರನ್ನು ಈ ಕೆಳಗಿನ ತೀರ್ಮಾನಕ್ಕೆ ಬರುವಂತೆ ಮಾಡಿದವು. ಅವರು ಅವನ್ನು ಆಧುನಿಕ ಮಾನವನ ಮುಂದಿಟ್ಟರು:

**೧. ದೇವರು ಇರುವುದು ಸತ್ಯ; ಅವನನ್ನು ಸಾಕ್ಷಾತ್ಕರಿಸಿಕೊಳ್ಳಬಹುದು.**

**೨. ಭಗವತ್ಸಾಕ್ಷಾತ್ಕಾರವೇ ಮನುಷ್ಯ ಜೀವನದ ಪ್ರಧಾನ ಗುರಿ.**

**೩. ಸ್ವಾರ್ಥಜನಿತವಾದ ಸುಖಗಳ ತ್ಯಾಗ ಹಾಗೂ ಗಾಢವಾದ ಭಗವತ್‌ಪ್ರೇಮವನ್ನು ಅಭ್ಯಾಸ ಮಾಡುವುದೇ ಇದಕ್ಕೆ ಮಾರ್ಗ.**

**೪.ಎಲ್ಲ ಧರ್ಮಗಳೂ ಒಂದೇ ಗುರಿಯತ್ತ ಸಾಗುವ ವಿವಿಧ ಮಾರ್ಗಗಳು.**

**೫. ಮಾನವನ ಸೇವೆಯೇ ಮಾಧವನ ಸೇವೆ.**

**೬. ಕಲಿಯುಗದಲ್ಲಿ ಸತ್ಯವಚನವೇ ಶ್ರೇಷ್ಠತಮ ತಪಸ್ಸು.**

ಶ್ರೀರಾಮಕೃಷ್ಣರ ನಿರ್ಯಾಣಾನಂತರ ಅವರ ಪ್ರಮುಖ ಶಿಷ್ಯರಾದ ಸ್ವಾಮಿ ವಿವೇಕಾನಂದರು ತಮ್ಮ ಗುರುದೇವರ ಯುವಶಿಷ್ಯರನ್ನೆಲ್ಲ ಒಂದೆಡೆ ಸೇರಿಸಿ, ಅವರನ್ನು 'ರಾಮಕೃಷ್ಣ ಸಂಘ' ಎಂಬ ಹೆಸರಿನ ಸಂನ್ಯಾಸೀ ಭ್ರಾತೃಭಾವದಲ್ಲಿ ಒಗ್ಗೂಡಿಸಿದರು. ೧೮೯೩ ರ ಸೆಪ್ಟೆಂಬರ್ ತಿಂಗಳಲ್ಲಿ ಚಿಕಾಗೋ ನಗರದಲ್ಲಿ ನಡೆದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು ಭಾಷಣ ಮಾಡಿದರು. ತಮ್ಮ ಗುರುವಿನ ಉಪದೇಶಗಳನ್ನು ಅವರು ಆಧುನಿಕ ಸಂದರ್ಭಕ್ಕೆ ತಕ್ಕಂತೆ ವ್ಯಾಖ್ಯಾನಿಸಿದರು. ಆ ಸಮ್ಮೇಳನದಲ್ಲಿ ಮಾತನಾಡಿದವರ ಪೈಕಿ ವಿವೇಕಾನಂದರೇ ಶ್ರೇಷ್ಠರು ಎಂದು ಅಮೆರಿಕದೆಲ್ಲೆಡೆ ಪರಿಗಣಿತವಾಯಿತು.

ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿ ಹೀಗೆ ಘೋಷಿಸಿದರು:



ಚಿಕಾಗೋದ ಸರ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರು

**"ಸರ್ವಧರ್ಮ ಸಮ್ಮೇಳನವು ಜಗತ್ತಿಗೆ ಏನನ್ನಾದರೂ ತೋರಿಸಿಕೊಟ್ಟಿದ್ದರೆ, ಅದು ಹೀಗಿದೆ: ಪಾವಿತ್ರ್ಯ, ಪರಿಶುದ್ಧತೆ, ದಾನ, ದಯೆಗಳು ಯಾವುದೇ ಒಂದು ಧರ್ಮದ ಸ್ವಂತ ಸ್ವತ್ತಲ್ಲ. ಪ್ರತಿಯೊಂದು ಧರ್ಮವೂ ಅತ್ಯಂತ ಉದಾರಚರಿತರಾದ ಸ್ತ್ರೀಪುರುಷರನ್ನು ರೂಪಿಸಿದೆ. ಇಷ್ಟೆಲ್ಲ ಸಾಕ್ಷ್ಯಾಧಾರಗಳು ಇರುವಾಗ ಯಾರಾದರೂ ತನ್ನ ಧರ್ಮವೊಂದೇ ಉಳಿಯುವುದಕ್ಕೆ ಅರ್ಹ, ಇತರ ಧರ್ಮಗಳು ನಾಶಹೊಂದುವುವು ಎಂಬ ಭ್ರಾಂತಿಯಲ್ಲಿದ್ದರೆ, ಅವನ ವಿಷಯದಲ್ಲಿ ನನಗೆ ಅಪಾರವಾದ ಮರುಕವಿದೆ. ಅವನಿಗೆ ನಾನು ಹೇಳುವುದಿಷ್ಟೆ – ಯಾರು ಎಷ್ಟೇ ವಿರೋಧಿಸಿದರೂ ಪ್ರತಿಯೊಂದು ಧರ್ಮದ ಧ್ವಜದ ಮೇಲೂ ಬಹು ಬೇಗ ಈ ಮಾತುಗಳು ಬರೆಯಲ್ಪಡುತ್ತವೆ: 'ಹೋರಾಟವಲ್ಲ, ಸೌಹಾರ್ದ'; 'ವಿನಾಶವಲ್ಲ, ಸ್ವೀಕಾರ'; 'ಸಾಮರಸ್ಯ ಮತ್ತು ಶಾಂತಿ.' "**

ಶ್ರೀರಾಮಕೃಷ್ಣರು ಅಥವಾ ಸ್ವಾಮಿ ವಿವೇಕಾನಂದರು ಹೊಸ ಧರ್ಮ ಅಥವಾ ತತ್ತ್ವವೊಂದನ್ನು ಪ್ರಾರಂಭಿಸಲು ಪ್ರಯತ್ನಿಸಲಿಲ್ಲ. ಅವರು ಆತ್ಮದ ಅತೀಂದ್ರಿಯ ಸಾಮ್ರಾಜ್ಯದಲ್ಲಿ ಸದಾ ಮಿನುಗುತ್ತಿದ್ದ ಆಧ್ಯಾತ್ಮಿಕ ಜ್ಯೋತಿಗಳಾಗಿದ್ದರು. ಭಾರತ ದೇಶವು ಸಂಕಟದ ಪರಿಸ್ಥಿತಿಯನ್ನು ಎದುರಿಸುತ್ತಿದ್ದ ಕಾಲದಲ್ಲಿ ಅವರು ಅದರ ಆಧ್ಯಾತ್ಮಿಕ ವಾರಸುದಾರರಾಗಿ ಮೂಡಿಬಂದರು. ಈ ಪರಂಪರೆಯನ್ನು ಅವರು ಪವಿತ್ರಗೊಳಿಸಿದರು. ಅದಕ್ಕೆ ಜೀವಂತಿಕೆ ಹಾಗೂ ಶ್ರೀಮಂತಿಕೆಯನ್ನು ತಂದರು. ಆದರೆ ಅವರು ಅದರ ಮಿತಿಯೊಳಗೆ ಮಾತ್ರವೇ ಇದ್ದುಬಿಡಲಿಲ್ಲ. ಭಾರತದ ಆಧ್ಯಾತ್ಮಿಕ ಪರಂಪರೆಯಲ್ಲಿ ಭದ್ರವಾಗಿ ಬೇರೂರಿದ್ದ ಅವರು ಇತರ ಧರ್ಮ ಸಂಸ್ಕೃತಿಗಳತ್ತಲೂ ತಮ್ಮ ಪ್ರಭಾವವನ್ನು ಬೀರಿದರು. ಹೀಗೆ ಇಡೀ ಮನುಕುಲಕ್ಕೆ ವಿಶ್ವಾತ್ಮಕ ಆಧ್ಯಾತ್ಮಿಕ ಆದರ್ಶವನ್ನು ನೀಡಿದ ಹರಿಕಾರರಾದರು. ಶ್ರೀರಾಮಕೃಷ್ಣರ ಹಾಗೂ ಸ್ವಾಮಿ ವಿವೇಕಾನಂದರ ತಾತ್ತ್ವಿಕ ವಿಚಾರಗಳು ಅವರ ವಿಶ್ವವ್ಯಾಪಕ ಆಧ್ಯಾತ್ಮಿಕ ದರ್ಶನದ ಅಭಿವ್ಯಕ್ತಿಯಾಗಿವೆ.

೧೮೯೭ ರಲ್ಲಿ ಭಾರತಕ್ಕೆ ಮರಳಿದ ಸ್ವಾಮಿ ವಿವೇಕಾನಂದರು 'ರಾಮಕೃಷ್ಣ ಮಿಷನ್' ಅನ್ನು ಸ್ಥಾಪಿಸಿದರು. ಆ ಹೊತ್ತಿಗಾಗಲೇ ಆರಂಭಗೊಂಡಿದ್ದ ರಾಮಕೃಷ್ಣ ಮಠದ ಸಮಾಜಸೇವಾ ಘಟಕವಾಗಿ ಇದು ಸ್ಥಾಪಿತವಾಯಿತು. ಸ್ವಾಮೀಜಿ **ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ** ಎಂಬ ಅವಳಿ ಆದರ್ಶವನ್ನು ಈ ಮಹಾಸಂಘದ ಸದಸ್ಯರ ಮುಂದೆ ಇಟ್ಟರು.

ಸುಮಾರು ನೂರು ವರ್ಷಗಳಿಗೂ ಹೆಚ್ಚು ಕಾಲದಿಂದ ಭಕ್ತರು ಹಾಗೂ ಗೃಹಸ್ಥ ಶಿಷ್ಯರ ನೆರವಿನಿಂದ ಕೆಲಸ ಮಾಡುತ್ತಿರುವ ರಾಮಕೃಷ್ಣ ಮಠ ಮತ್ತು ರಾಮಕೃಷ್ಣ ಮಿಷನ್ ಎಂಬ ಸಂನ್ಯಾಸಿ ಸಂಘವು ಭಾರತದಲ್ಲಿ ಇಂದು ಒಂದು ಪ್ರತಿಷ್ಠಿತ ಸ್ಥಾನವನ್ನು ಪಡೆದುಕೊಂಡಿದೆ. ಈ ಸಂಸ್ಥೆಯು ಜಗತ್ತಿನಾದ್ಯಂತ **ವಿಶ್ವಶಾಂತಿ, ಧರ್ಮಸಮನ್ವಯ ಮತ್ತು ಲೋಕ ಕಲ್ಯಾಣ**ಗಳಿಗಾಗಿ ಕೆಲಸ ಮಾಡುತ್ತಿರುವ ಸಂಘಟನೆಯೆಂದು ಗುರುತಿಸಲ್ಪಟ್ಟಿದೆ. ಭಾರತದಲ್ಲಿ ಇದರ ೧೨೮ ಶಾಖೆಗಳು ಇವೆ. ಹಾಗೆಯೇ ಬಾಂಗ್ಲಾದೇಶ, ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ಬ್ರೆಜಿಲ್, ಅರ್ಜೆಂಟೈನಾ, ಜಪಾನ್, ರಷ್ಯಾ, ಯೂರೋಪಿನ ಹಲವು ದೇಶಗಳು ಸೇರಿದಂತೆ ವಿದೇಶಗಳಲ್ಲಿ ೪೩ ಶಾಖೆಗಳಿವೆ. ರಾಮಕೃಷ್ಣ ಮಿಷನ್ನಿನ ಪ್ರಧಾನ ಕಾರ್ಯದರ್ಶಿಯಾಗಿ ಈ ಸಮ್ಮೇಳನದಲ್ಲಿ ಭಾಗವಹಿಸಲು ನನ್ನನ್ನು ಆಹ್ವಾನಿಸಿದ್ದಕ್ಕಾಗಿ ನಾನು ಇದರ ಸಂಘಟಕರಿಗೆ ಕೃತಜ್ಞನಾಗಿದ್ದೇನೆ (*ಪರಮಪೂಜ್ಯರು ಆಗ ಆ ಪದವಿಯನ್ನು ಅಲಂಕರಿಸಿದ್ದರು* – ಸಂ.).

'ಭಗವಂತನು ನಾಮರೂಪಗಳಿಗೆ ಅತೀತನಾಗಿದ್ದಾನೆ. ಹಾಗೆಯೇ ಎಲ್ಲ ಸಾಪೇಕ್ಷ ವಸ್ತುಗಳನ್ನೂ ಮೀರಿದವನಾಗಿದ್ದಾನೆ' – ಹೀಗೆಂದು ಭಾರತದ ಪ್ರಾಚೀನ ಋಷಿಗಳು ಸಾರಿದರು. ಅವನು, ಅವಳು ಅಥವಾ ಅದು – ಇವೆಲ್ಲವನ್ನೂ ಆ ಪರತತ್ತ್ವವು ಮೀರಿದೆ. ಅಂತೆಯೇ ಅದು ಸರ್ವವ್ಯಾಪಿಯೂ ಆಗಿದೆ. ಈ ತತ್ತ್ವವು ಎಲ್ಲ ಜೀವಿಗಳ ಅಂತರ್ಯದಲ್ಲಿರುವ ಸಾರಭೂತ ವಸ್ತು; ಅವೆಲ್ಲದರ ದೇಹ–ಮನಸ್ಸುಗಳಿಗೆ ಆಧಾರ. ಭಗವಂತನು ಅತ್ಯಂತ ಶ್ರೇಷ್ಠನೂ ಅಚಲನೂ ಆಗಿದ್ದಾನೆ. ಅವನನ್ನು ಅನ್ವೇಷಿಸುವುದರಿಂದ, ಅವನನ್ನು ಸೇರುವುದರಿಂದ ಮಾನವನು ತನ್ನೆಲ್ಲ ಮಿತಿಗಳನ್ನೂ ದಾಟಿಹೋಗಿ ಶುದ್ಧ ಚೈತನ್ಯದಲ್ಲಿ ಲೀನನಾಗುತ್ತಾನೆ. ಈ ಶುದ್ಧಚೈತನ್ಯವೇ ದಿವ್ಯತೆ.

ಮೇಲಿನ ವಿವರಣೆಯು ಪ್ರಾಚೀನ ಋಷಿಗಳ ಅಂತಿಮ ನಿರ್ಣಯವನ್ನು ಸಂಗ್ರಹವಾಗಿ ತಿಳಿಸುತ್ತದೆ. ಆದರೆ ಆತ್ಯಂತಿಕ ಸತ್ಯವನ್ನು ತಲುಪಲು ಅಸಂಖ್ಯಾತ ಮಾರ್ಗಗಳು ಇರಬಹುದು ಎಂದು ಆ ಮುನಿಗಳು ಖಚಿತವಾಗಿ ಹೇಳುತ್ತಾರೆ. ಆದ್ದರಿಂದ ಪ್ರತಿಯೊಬ್ಬ ಸಾಧಕನಿಗೂ ಯಾವುದಾದರೂ ಒಂದು ಮಾರ್ಗ ವನ್ನು ಅನುಸರಿಸಿ ಗುರಿ ತಲುಪುವ ಸಂಪೂರ್ಣ ಸ್ವಾತಂತ್ರ್ಯವನ್ನು ಅವರು ನೀಡಿದ್ದಾರೆ. ಸ್ವಾಮಿ ವಿವೇಕಾನಂದರ ಮಾತುಗಳಲ್ಲಿ ಹೇಳುವುದಾದರೆ,

**ಪ್ರತಿಯೊಂದು ಆತ್ಮನಲ್ಲಿಯೂ ದಿವ್ಯತೆ ಹುದುಗಿದೆ. ಈ ಸುಪ್ತವಾದ ದಿವ್ಯತೆಯನ್ನು ಬಾಹ್ಯ ಮತ್ತು ಆಂತರಿಕ ಪ್ರಕೃತಿಗಳ ನಿಗ್ರಹದಿಂದ ವ್ಯಕ್ತಪಡಿಸುವುದೇ ಜೀವನದ ಗುರಿ. ಇದನ್ನು ಕರ್ಮಯೋಗದಿಂದಾಗಲಿ, ಭಕ್ತಿಯೋಗದಿಂದಾಗಲಿ, ರಾಜಯೋಗದಿಂದಾಗಲಿ, ಜ್ಞಾನಯೋಗದಿಂದಾಗಲಿ ಯಾವು ದಾದರೂ ಒಂದು ಮಾರ್ಗದಿಂದ ಅಥವಾ ಎಲ್ಲ ಮಾರ್ಗಗಳ ಸಂಯೋಗದಿಂದ ಸಾಧಿಸಿ ಮುಕ್ತರಾಗಿ.**

**ಇದೇ ಧರ್ಮದ ಸಾರಸರ್ವಸ್ವ. ಸಿದ್ಧಾಂತ, ನಂಬಿಕೆ, ಬಾಹ್ಯಾ ಚಾರ, ಪವಿತ್ರಗ್ರಂಥ, ದೇವಸ್ಥಾನ, ವಿಗ್ರಹ – ಇವೆಲ್ಲ ಗೌಣ.**

ಜಗತ್ತಿನ ದುರಂತವೆಂದರೆ, ಮೇಲೆ ಹೇಳಿದ ಗೌಣ ವಿಷಯಗಳ ಬಗ್ಗೆಯೇ ನಾವು ಹೋರಾಡುತ್ತ ಬಂದಿದ್ದೇವೆ. ನಾವು ಕಾಳನ್ನು ತೂರಿಬಿಟ್ಟು, ಜೊಳ್ಳಿನ ಕುರಿತಾಗಿ ಕಾಳಜಿ ವಹಿಸುತ್ತಿದ್ದೇವೆ. ಧರ್ಮಗಳ ಹಿಂದಿರುವ ಏಕತೆಯನ್ನು ಗುರುತಿಸುವ ಬದಲು, ಅವುಗಳ ನಡುವಣ ಭೇದವನ್ನೇ ರಾಜಕಾರಣವು ಎತ್ತಿ ಹಿಡಿದು ತೋರಿಸುತ್ತದೆ. ಇದರ ಪರಿಣಾಮವೇ ಶತಮಾನಗಳಿಂದ ನಡೆದು ಬಂದ ಸಂಘರ್ಷ, ಹೋರಾಟ ಮತ್ತು ಸಾವಿರಾರು ಜನರ ಸಾವು.

ಎಲ್ಲ ಧರ್ಮಗಳೂ ಒಬ್ಬನೇ ಭಗವಂತನೆಡೆಗೆ ಒಯ್ಯಲು, ಇಂದಿಗೂ ಪ್ರಸ್ತುತವಾದ ಮಾರ್ಗಗಳು ಎಂಬ ಶ್ರದ್ಧೆಯನ್ನು ನಾವು ಬೆಳೆಸಿಕೊಳ್ಳಬೇಕು. ಇದು ಹೇಗೆಂದರೆ, ಪೂರ್ವ, ಪಶ್ಚಿಮ, ಉತ್ತರ, ದಕ್ಷಿಣ – ಈ ನಾಲ್ಕೂ ದಿಕ್ಕುಗಳಿಂದ ಒಂದೇ ಪರ್ವತವನ್ನು ಏರಲು ಪ್ರಯತ್ನಿಸುವಂತೆ. ನಾಲ್ಕು ವ್ಯಕ್ತಿಗಳು ಪರ್ವತದ ನಾಲ್ಕು ದಿಕ್ಕುಗಳಿಂದ ಈ ಪರ್ವತವನ್ನು ಏರುತ್ತ ಬಂದರೆ, ಮೊದಮೊದಲು ಅವರ ನಡುವಿನ ಅಂತರವು ಸಹಜವಾಗಿಯೇ ಹೆಚ್ಚಾಗಿರುತ್ತದೆ. ಆದರೆ ಅವರು ಏರುತ್ತ ಹೋದಂತೆ, ಆ ಅಂತರ ಕಡಮೆಯಾಗುತ್ತ ಹೋಗುತ್ತದೆ. ಆದರೆ ಈ ವಿಷಯ ಅವರ ಅರಿವಿಗೆ ಬರುವುದಿಲ್ಲ. ಕಡೆಗೆ ಪರ್ವತದ ಶಿಖರವನ್ನು ತಲುಪಿದಾಗ, ಅವರೆಲ್ಲರೂ ಪರಸ್ಪರ ಮುಖಾಮುಖಿಯಾಗುತ್ತಾರೆ, ಹಸ್ತಲಾಘವ ಮಾಡಿಕೊಳ್ಳುತ್ತಾರೆ.

ಅತ್ಯುನ್ನತವಾದುದನ್ನು ತಲುಪುವ ಪ್ರಯತ್ನವನ್ನೇ ನಾವು ನೈಜಧರ್ಮವೆನ್ನುವುದು. ಅಂದರೆ, ಮನುಷ್ಯನು ಮೃಗ ಸ್ವಭಾವವನ್ನು ಮೀರಿ, ತನ್ನ ದೈವೀಸ್ವರೂಪವನ್ನು ಅರಿಯುವ ಪ್ರಯತ್ನವೇ ಇದು. ಧರ್ಮವು ರಾಜಕಾರಣದ ಜೊತೆಯಲ್ಲಿ ಮಿಳಿತಗೊಳ್ಳಬಾರದು. ಇದರಿಂದ ಕೇವಲ ದ್ವೇಷ ಮತ್ತು ಭಯಗಳು ಹುಟ್ಟಿಕೊಳ್ಳುತ್ತವೆ.

ಮನುಕುಲಕ್ಕೆ ಸೇರಿದ ಎಲ್ಲರೂ ತಮ್ಮ ತಮ್ಮ ವೈಶಿಷ್ಟ್ಯಗಳನ್ನು ಕಳೆದುಕೊಳ್ಳದೆ, ಭಗವಂತನೆಂಬ ನೆರಳಿನಾಶ್ರಯದಲ್ಲಿ ಒಂದಾಗಬೇಕು. ರಾಜಕಾರಣವು ಬಿತ್ತುವ ವಿದ್ವೇಷ ಮತ್ತು ಭಯಗಳ ಜಾಗದಲ್ಲಿ, ಧರ್ಮವು ಪ್ರೀತಿ ನಿರ್ಭಯತೆ ಹಾಗೂ ಶಾಂತಿಗಳನ್ನು ಹುಟ್ಟುಹಾಕಬೇಕು. ಈ ಉದ್ದೇಶದಿಂದಲೇ ಧರ್ಮ–ಧರ್ಮಗಳ ನಡುವಿನ ಸಂವಾದದಿಂದ ಇತರ ಧರ್ಮಗಳನ್ನು ಅರಿತುಕೊಳ್ಳುವುದು ಬಹಳ ಆವಶ್ಯಕ.

ಇನ್ನೊಂದು ವಿಷಯವನ್ನು ನಾನು ಇಲ್ಲಿ ಒತ್ತಿ ಹೇಳಬೇಕಾಗಿದೆ. ಪ್ರಪಂಚದ ಎಲ್ಲ ಪ್ರಮುಖ ಧರ್ಮಗಳೂ ಆಯಾ ಧರ್ಮದ ಪ್ರವರ್ತಕರು ಸಾಕ್ಷಾತ್ಕರಿಸಿಕೊಂಡ ಶಾಶ್ವತ ಸತ್ಯಗಳನ್ನು ಹೇಳುತ್ತವೆ. ಅದನ್ನು ಅನುಸರಿಸಿ ಸಮಾಜವನ್ನು ಸಂಘಟಿಸಬೇಕೆಂದು ಇತರ ಕೆಲವು ವ್ಯಕ್ತಿಗಳು ಹಲವು ತಾತ್ಕಾಲಿಕ ಮಾರ್ಗದರ್ಶನಗಳನ್ನು ನೀಡಿರುತ್ತಾರೆ. ಆ ಧರ್ಮಗಳು ಅವುಗಳನ್ನು ಒಪ್ಪಿಕೊಂಡಿರುತ್ತವೆ. ಈ ನೈತಿಕ ನಿಯಮಗಳನ್ನು ಅನುಸರಿಸುವ ಮೂಲಕ ಬಹುತೇಕ ಎಲ್ಲ ಸ್ತ್ರೀಪುರುಷರೂ, ಶ್ರೇಷ್ಠವಾದ ಗುರಿಯನ್ನು ತಲುಪಬೇಕು ಎಂಬುದೇ ಅವುಗಳ ನಿರೀಕ್ಷೆಯಾಗಿತ್ತು. ಈ ತಾತ್ಕಾಲಿಕ ಮೌಲ್ಯಗಳನ್ನು ಶಾಶ್ವತ ಸತ್ಯವನ್ನಾಗಿ ಮಂಡಿಸಲು ಪ್ರಯತ್ನಿಸಿದಾಗಲೇ, ಅನೇಕ ವೇಳೆ ಧಾರ್ಮಿಕ ಸಂಘರ್ಷಗಳು ಆರಂಭವಾಗುವುದು. ಆಯಾ ಸಾಮಾಜಿಕ ಪರಿಸರಕ್ಕೆ ಅನುಸಾರವಾಗಿ ಇವು ಕಾಲಕಾಲಕ್ಕೆ ಬದಲಾಗಬೇಕು. ಪ್ರವಾದಿಗಳು ತಮ್ಮ ನೇರ ಅನುಭವದಿಂದ ಕಂಡುಕೊಂಡ ಶಾಶ್ವತ ಸತ್ಯಗಳಿಗೆ ಮಾತ್ರವೇ ಯಾವಾಗಲೂ ಪ್ರಾಮುಖ್ಯತೆ ಇರಬೇಕು.

ಬಹುಧರ್ಮವಾದವನ್ನು (Pluralism) ಕುರಿತ ಆಧುನಿಕ ತಾತ್ತ್ವಿಕ ಕಲ್ಪನೆಯು ಪ್ರಪಂಚದ ಧರ್ಮಗಳನ್ನು ನೋಡುವ ದೃಷ್ಟಿಕೋನ ಹೀಗಿದೆ: ಅವು ಆತ್ಯಂತಿಕ ಸತ್ಯವನ್ನು ಕುರಿತಂತೆ ಮನುಷ್ಯನ ವಿವಿಧ ಅಭಿವ್ಯಕ್ತಿಗಳು; ಅವು ವಿಭಿನ್ನ ರೀತಿಗಳಲ್ಲಿ ಮೈದೋರಿವೆಯಷ್ಟೆ. ಆದ್ದರಿಂದ ಅವು ಹೀಗೆಯೇ ಎಂದು ಮೌಲ್ಯನಿರ್ಧಾರಣೆ ಮಾಡುವುದು ಸರಿಯಲ್ಲ.

ಇದು ನಿಜವಾಗಿಯೂ ಪ್ರಶಂಸನೀಯ ಮನೋಭಾವ. ಆದರೆ ಪಾಶ್ಚಾತ್ಯ ಬಹುಧರ್ಮವಾದದ ದೊಡ್ಡ ಕೊರತೆ ಏನೆಂದರೆ ಅದಕ್ಕೆ ಪ್ರಾಯೋಗಿಕ ತಳಹದಿ ಇಲ್ಲ. ಬಹುಧಾರ್ಮಿಕತೆಗೆ ಪ್ರಾಯೋಗಿಕ ತಳಹದಿಯನ್ನು ನೀಡಿದವರೆಂದರೆ ಶ್ರೀರಾಮಕೃಷ್ಣ ಪರಮಹಂಸರು. ಅವರು ಮಾಡಿದ ಮಹಾನ್ ಸಾಧನೆ ಇದು. ಶ್ರೀರಾಮಕೃಷ್ಣರು ವಿವಿಧ ಧರ್ಮಗಳ ಮಾರ್ಗಗಳನ್ನು ಅನುಸರಿಸಿ, ಅವೆಲ್ಲವೂ ಒಂದೇ ಗುರಿಯತ್ತ ಸಾಗುತ್ತವೆ ಎಂಬುದನ್ನು ಪ್ರದರ್ಶಿಸಿದರು. ಇದರಿಂದಾಗಿ ಧರ್ಮಸಮನ್ವಯವಾದವು ಪ್ರಾಯೋಗಿಕವಾದ